**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಎಸ್.ಸಿ. ನಂ. 5017/2022**

**ಪ್ರಾಸಾ -- 7**
**ಚಾಸಾ –10**

ಸಾಕ್ಷಿಯ ಹೆಸರು– ಅರವಿಂದ

ತಂದೆಯ ಹೆಸರು – ಗಣೇಶ

ವಯಸ್ಸು – 24 ವರ್ಷ

ವೃತ್ತಿ – ವಾಟರ್ ಸಪ್ಲೈ

ವಿಳಾಸ – ವಿರಾಜಪೇಟೆ

ದಿಃ 25.10.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನನಗೆ ಚಾಸಾ 9 ಹಾಗೂ 11 ರವರ ಪರಿಚಯ ಇಲ್ಲ. ಚಿಮ್ಮಿ ಎನ್ನುವ ಮಹಿಳೆ ಮೃತಪಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇಲ್ಲ. ಈಗ್ಗೆ 2 ವರ್ಷಗಳ ಹಿಂದೆ ನನ್ನನ್ನು ಪೊಲೀಸರು ಮೈಸೂರಿನ ಆಸ್ಪತ್ರೆಗೆ ಕರೆದು ಒಂದು ದಾಖಲೆಗೆ ಸಹಿ ಮಾಡುವಂತೆ ಹೇಳಿದ್ದರು. ನಾನು ದೂರದಿಂದ ಒಂದು ಮಹಿಳೆಯ ಶವವನ್ನು ನೋಡಿದ್ದೆ. ನನಗೆ ಆ ಮಹಿಳೆಯ ಹೆಸರು ಗೊತ್ತಿಲ್ಲ. ಆ ಮಹಿಳೆ ಹೇಗೆ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈಗ ತೋರಿಸಿದ ದಾಖಲೆಗಳಲ್ಲಿ ನನ್ನ ಸಹಿಗಳು ಇವೆ. ಸಾಕ್ಷಿ ತನ್ನ ಸಹಿ ಗುರುತಿಸಿದ ದಾಖಲೆ ನೋಟೀಸು ಆಗಿದ್ದು ಅದನ್ನು ಈಗಾಗಲೇ ನಿಪಿ 16 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 16(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ತನ್ನ ಸಹಿ ಗುರುತಿಸಿದ ಇನ್ನೊಂದು ದಾಖಲೆ ಶವ ಮಹಜರು ಆಗಿದ್ದು ಅದನ್ನು ಈಗಾಗಲೇ ನಿಪಿ 17 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 17(ಬಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಛಾಯಾಚಿತ್ರಗಳಲ್ಲಿ ನಾನು ಕಾಣಿಸುತ್ತಿದ್ದೇನೆ. ಸದರಿ ಛಾಯಾಚಿತ್ರಗಳನ್ನು ಈಗಾಗಲೇ ನಿಪಿ 14 ಮತ್ತು 15 ಎಂದು ಗುರುತಿಸಲಾಗಿದೆ. ಈಗ ತೋರಿಸಿದ ಛಾಯಾಚಿತ್ರಗಳಲ್ಲಿ ಮಹಿಳೆಯ ಮೃತ ದೇಹ ಕಾಣಿಸುತ್ತಿದೆ. ಅವುಗಳನ್ನು ಈಗಾಗಲೇ ನಿಪಿ 2 ಹಾಗೂ 3 ಎಂದು ಗುರುತಿಸಲಾಗಿದೆ. ನಿಪಿ 16 ಹಾಗೂ 17 ರಲ್ಲಿ ಬರೆದಿರುವ ವಿವರಗಳು ನನಗೆ ಗೊತ್ತಿಲ್ಲ. ನಾನು ಪೊಲೀಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗಳಲ್ಲಿ ಸಹಿ ಮಾಡಿದ್ದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

2. ದಿಃ 08.03.2022 ರಂದು ಮೈಸೂರಿನ ಕೆ ಆರ್ ಆಸ್ಪತ್ರೆಯ ಮೆಡಿಕಲ್ ಕಾಲೇಜಿನ ಶವಾಗಾರದಲ್ಲಿ ಪೊಲೀಸರು ನನ್ನ, ಚಾಸಾ 9 ಹಾಗೂ 11 ರವರ ಸಮಕ್ಷಮ, ದಿಃ 02.03.2022 ರಂದು ರಾತ್ರಿ ಚಿಮ್ಮಿರವರು ಪೂಣಚ್ಚ ರವರ ಲೈನ್ ಮನೆಯಲ್ಲಿ ಮಂಜು ಅಲಿಯಾಸ್ ಸುರೇಶ್ ಹಾಗೂ ಇನ್ನೊಬ್ಬ ವ್ಯಕ್ತಿ ಸೇರಿಕೊಂಡು ದುರುದ್ದೇಶದಿಂದ ಆಕೆ ವಾಸವಿದ್ದ ಲೈನ್ ಮನೆಗೆ ಹೋಗಿ ಆಕೆಯೊಂದಿಗೆ ಜಗಳ ಮಾಡಿ ಕೊಲೆ ಮಾಡುವ ಉದ್ದೇಶದಿಂದ ಆಕೆಯ ಕುತ್ತಿಗೆಯ ಭಾಗಕ್ಕೆ ಕತ್ತಿಯಿಂದ ಕಡಿದ ಪರಿಣಾಮ ಆಕೆ ಮಾರಣಾಂತಿಕವಾಗಿ ಗಾಯಗೊಂಡು ನಂತರ ಆಕೆ ಚಿಕಿತ್ಸೆ ಫಲಕಾರಿಯಾಗದೇ ದಿಃ 07.03.2022 ರಂದು ರಾತ್ರಿ 9.13 ಗಂಟೆಗೆ ಮೃತಪಟ್ಟಿರುವುದಾಗಿ ನಮಗೆ ಹೇಳಿ ಮೃತ ಚಿಮ್ಮಿ ರವರ ಶವ ತನಿಖಾ ಮಹಜರನ್ನು ಮಾಡುವ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡು ನಿಪಿ 16 ರಂತೆ ನೋಟೀಸು ನೀಡಿ, ಆಕೆಯ ಶವವನ್ನು ಪರಿಶೀಲನೆ ಮಾಡಿ ನಿಪಿ 17 ರಂತೆ ಶವ ತನಿಖಾ ಮಹಜರನ್ನು ಮಃ 12.00 ರಿಂದ 3.00 ಗಂಟೆಯವರೆಗೆ ಬರವಣಿಗೆ ಮಾಡಿ ಓದಿ ಹೇಳಿ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 16 ಹಾಗೂ 17 ರಲ್ಲಿ ಬರೆದಿರುವ ಎಲ್ಲಾ ವಿವರಗಳು ಗೊತ್ತಿದ್ದರೂ ಕೂಡ ಆರೋಪಿಗಳಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಎಸ್.ಸಿ. ನಂ. 5017/2022**

**ಪ್ರಾಸಾ -- 8**

**ಚಾಸಾ –13**

ಸಾಕ್ಷಿಯ ಹೆಸರು– ಪುನಿತ್

ತಂದೆಯ ಹೆಸರು – ಲೇಟ್ ವಿಠಲ

ವಯಸ್ಸು – 30 ವರ್ಷ

ವೃತ್ತಿ – ಡ್ರೈವರ್

ವಿಳಾಸ – ಅಂಬಟ್ಟಿ ಗ್ರಾಮ

ದಿಃ 25.10.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನನಗೆ ಚಾಸಾ 14 ರವರ ಪರಿಚಯ ಇಲ್ಲ. 2022 ನೇ ಇಸವಿ ಮಾರ್ಚ್ ತಿಂಳಿನಲ್ಲಿ ಬೆಃ 8.00 ಗಂಟೆಯ ಸುಮಾರಿಗೆ ನಾನು ಹಾಗೂ ಚಾಸಾ 14 ರವರು ವಿರಾಜಪೇಟೆಯ ಮಲಬಾರ್ ರಸ್ತೆಯ ಪೆಟ್ರೋಲ್ ಬಂಕ್ ಬಳಿ ನಿಂತಿದಿದ್ದಾಗ ಪೊಲೀಸರು ಬಂದು ಬಾಡಗ ಗ್ರಾಮದಲ್ಲಿ ಒಂದು ಕೊಲೆಯಾಗಿದೆ, ಕೊಲೆ ಮಾಡಲು ಬಳಸಿದ ಆಯುಧ ಹಾಗೂ ಆರೋಪಿಗಳು ಧರಿಸಿದ ಬಟ್ಟೆಗಳನ್ನು ಜಪ್ತು ಮಾಡಲು ಇದೆ, ಪಂಚರಾಗಿ ಬನ್ನಿ ಎಂದು ಹೇಳಿ ನೋಟೀಸು ನೀಡಿದ್ದು, ನಾವು ಒಪ್ಪಿಕೊಂಡಿರುತ್ತೇವೆ. ಸದರಿ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 18 ಎಂದು ಸಾಕ್ಷಿಯ ಸಹಿಯನ್ನು ನಿಪಿ 18(ಎ) ಎಂದು ಗುರುತಿಸಲಾಯಿತು. ನಮ್ಮನ್ನು ಅಲ್ಲಿಂದ ಪೊ. ಠಾಣೆಗೆ ಕರೆದುಕೊಂಡು ಹೋದರು. ಪೊ. ಠಾಣೆಯಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು. ಆ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದೆ ಇರುವಂತಹ ಆರೋಪಿಗಳು ಆಗಿರುತ್ತಾರೆ. ಪೊ. ಠಾಣೆಯಿಂದ ನಾನು, ಚಾಸಾ 14, ಪೊಲೀಸರು ಹಾಗೂ ಆರೋಪಿಗಳು ಇಲಾಖಾ ವಾಹನದಲ್ಲಿ ಹೊರಟು ವಿ ಬಾಡಗ ಗ್ರಾಮದ ಪೂಣಚ್ಚ ರವರ ಲೈನ್ ಮನೆಯ ಬಳಿ ಹೋಗಿದ್ದು, ಅಲ್ಲಿ ಆರೋಪಿಗಳು ಪೊಲೀಸರ ಸಮಕ್ಷಮ ನಾವು ಚಿಮ್ಮಿಯನ್ನು ಕೊಲೆ ಮಾಡಿರುತ್ತೇವೆ ಎಂದು ಹೇಳಿದ್ದು, ಲೈನ್ ಮನೆಯ ಒಳಗಡೆ ಬೆಡ್ ಮೇಲೆ ರಕ್ತದ ಕಲೆ ಇದ್ದು, ಪೊಲೀಸರು ರಕ್ತದ ಕಲೆ ಇರುವ ಭಾಗದ ಹಾಸಿಗೆ ಮೇಲೆ ಇದ್ದ ಬಟ್ಟೆಯನ್ನು ಕತ್ತರಿಸಿ ಜಪ್ತು ಮಾಡಿಕೊಂಡರು. ಸದರಿ ಬಟ್ಟೆಯನ್ನು ಈಗ ನೋಡುತ್ತಿದ್ದು ಅದನ್ನು ಮು

ಮಾ 4 ಎಂದು ಗುರುತಿಸಲಾಯಿತು. ಪೊಲೀಸರು ಆ ಸಮಯದಲ್ಲಿ ಸುಮಾರು 10.00-10.30 ಗಂಟೆಗೆ ಮಹಜರನ್ನು ಮಾಡಿದ್ದರು. ಸದರಿ ಮಹಜರಿಗೆ ನಾನು ಸಹಿ ಮಾಡಿದ್ದೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 19 ಎಂದು ಸಾಕ್ಷಿಯ ಸಹಿಯನ್ನು ನಿಪಿ 19(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮದಲ್ಲಿ ಚಾಸಾ 14 ರವರು ಕೂಡ ನಿಪಿ 19 ರ ಮೇಲೆ ಸಹಿ ಮಾಡಿದ್ದರು. ನಿಪಿ 19 ಮಹಜರು ಮಾಡುವ ಸಮಯದಲ್ಲಿ ಪೊಲೀಸರು ಛಾಯಾಚಿತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ 20 ರಿಂದ 23 ಎಂದು ಗುರುತಿಸಲಾಯಿತು.

2. ನಂತರ ಸುಮಾರು 200 ಮೀಟರ್ ದೂರದಲ್ಲಿ ಆರೋಪಿಗಳು ಒಂದು ಸೇತುವ ಬಳಿ ನಮ್ಮನ್ನು ಕರೆದುಕೊಂಡು ಹೋಗಿ ನಾವಿಬ್ಬರೂ ಮದ್ಯಪಾನ ಮಾಡಿದ್ದ ಸ್ಥಳ ಎಂದು ತೋರಿಸಿದ್ದು, ಪೊಲೀಸರು ಸದರಿ ಸ್ಥಳವನ್ನು ಪರಿಶೀಲನೆ ಮಾಡಿ ಮಹಜರನ್ನು ಮಾಡಿರುತ್ತಾರೆ. ಸದರಿ ಮಹಜರನ್ನು ಮಃ ಸುಮಾರು 11.00 ಗಂಟೆಗೆ ಮಾಡಿರುತ್ತಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿದ್ದೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 24 ಎಂದು ಸಾಕ್ಷಿಯ ಸಹಿಯನ್ನು ನಿಪಿ 24(ಎ) ಎಂದು ಗುರುತಿಸಲಾಯಿತು. ನಿಪಿ 24 ರ ಮೇಲೆ ಚಾಸಾ 14 ರವರು ಕೂಡ ಸಹಿ ಮಾಡಿದ್ದರು. ನಿಪಿ 24 ಮಹಜರು ಮಾಡುವ ಸಮಯದಲ್ಲಿ ಪೊಲೀಸರು ಛಾಯಾಚಿತ್ರವನ್ನು ತೆಗೆದಿದ್ದು ಅದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 25 ಎಂದು ಗುರುತಿಸಲಾಯಿತು.

3. ಆರೋಪಿ ಸುಬ್ರಮಣಿ ತಾನು ಕೃತ್ಯ ಸಮಯದಲ್ಲಿ ಧರಿಸಿದ ಬಟ್ಟೆಗಳನ್ನು ಹಾಜರುಪಡಿಸುವುದಾಗಿ ಹೇಳಿದ ಮೇರೆಗೆ ಪೊಲೀಸರು ಆರೋಪಿಗಳನ್ನು ಹಾಗೂ ನಮ್ಮನ್ನು ಜೀಪಿನಲ್ಲಿ ಕರೆದುಕೊಂಡು ಹೋಗಿದ್ದು ಆರೋಪಿ ಸುಬ್ರಮಣಿ ಮುತ್ತಣ್ಣನವರ ಲೈನ್ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಆರೋಪಿಯು ತಾನು ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಟೆಗಳು ಎಂದು ಹಗ್ಗದ ಮೇಲೆ ಹಾಕಿದ್ದ ಒಂದು ಕೆಂಪು ಬಣ್ಣದ ಶರ್ಟು ಹಾಗೂ ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಹಾಜರುಪಡಿಸಿದ್ದು ಅದರಲ್ಲಿ ರಕ್ತದ ಕಲೆ ಇದ್ದು, ಸದರಿ ಬಟ್ಟೆಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ

ಮು ಮಾ 5 ಮತ್ತು 6 ಎಂದು ಗುರುತಿಸಲಾಯಿತು. ಅಲ್ಲಿ ಪೊಲೀಸರು ಸದರಿ ಬಟ್ಟೆಗಳನ್ನು ಜಪ್ತು ಮಾಡಿ ಮಹಜರು ಮಾಡಿದ್ದರು. ಸದರಿ ಮಹಜರನ್ನು 11.30 - 12.00 ಗಂಟೆಯ ಸುಮಾರಿಗೆ ಮಾಡಿದ್ದರು. ಸದರಿ ಮಹಜರಿಗೆ ನಾನು ಸಹಿ ಮಾಡಿದ್ದೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 26 ಎಂದು ಸಾಕ್ಷಿಯ ಸಹಿಯನ್ನು ನಿಪಿ 26(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಚಾಸಾ 14 ರವರು ಕೂಡ ನಿಪಿ 26 ಮಹಜರಿಗೆ ಸಹಿ ಮಾಡಿದ್ದರು. ನಿಪಿ 26 ಮಹಜರು ಮಾಡುವ ಸಮಯದಲ್ಲಿ ಮುತ್ತಣ್ಣ - ಚಾಸಾ 15 ಕೂಡ ಹಾಜರಿದ್ದರು. ಅವರೂ ಕೂಡ ನಿಪಿ 26 ರ ಮೇಲೆ ಸಹಿ ಮಾಡಿದ್ದರು. ನಿಪಿ 26 ಮಹಜರು ಮಾಡುವ ಸಮಯದಲ್ಲಿ ಛಾಯಾಚಿತ್ರಗಳನ್ನು ತೆಗೆದಿದ್ದು, ಸದರಿ ಛಾಯಾಚಿತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ 27 ಮತ್ತು 28 ಎಂದು ಗುರುತಿಸಲಾಯಿತು.

4. ಅಲ್ಲಿಂದ ಆರೋಪಿ ಸುರೇಶ ತಾನು ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಹಾಗೂ ಕೃತ್ಯಕ್ಕೆ ಉಪಯೋಗಿಸಿದ ಕತ್ತಿಯನ್ನು ಹಾಜರುಪಡಿಸುವುದಾಗಿ ಹೇಳಿ ನಮ್ಮನ್ನು ವಿ ಬಾಡಗ ಗ್ರಾಮದ ಸುರೇಶ್‌ರವರ ಲೈನ್ ಮನೆಯ ಬಳಿಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಆರೋಪಿ ಸುರೇಶ್ ತಾನು ಕೃತ್ಯಕ್ಕೆ ಉಪಯೋಗಿಸಿದ ಕತ್ತಿಯನ್ನು ಪೊಲೀಸರ ಸಮಕ್ಷಮ ಹಾಜರುಪಡಿಸಿದ್ದು ಸದರಿ ಕತ್ತಿಯನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಆರೋಪಿಯು ತಾನು ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಟೆಗಳಾದ ನೀಲಿ ಬಣ್ಣದ ಜುಬ್ಬಾ ಹಾಗೂ ಒಂದು ನಶ್ಯ ಬಣ್ಣದ ಟ್ರ್ಯಾಕ್ ಪ್ಯಾಂಟನ್ನು ಹಾಜರುಪಡಿಸಿದ್ದು, ಸದರಿ ಬಟ್ಟೆಗಳಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಆಗಿದ್ದು, ಅವುಗಳನ್ನು ಪೊಲೀಸರು ಜಪ್ತು ಮಾಡಿರುತ್ತಾರೆ ಹಾಗೂ ಮಹಜರನ್ನು ಬರವಣಿಗೆ ಮಾಡಿರುತ್ತಾರೆ. ಸದರಿ ಮಹಜರಿನಲ್ಲಿ ನಾನು ಸಹಿ ಮಾಡಿದ್ದೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ 11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 11(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ನಿಪಿ 11 ಮಹಜರಿಗೆ ಚಾಸಾ 14 ಹಾಗೂ ಚಾಸಾ 7 ರವರು ಸಹಿ ಮಾಡಿದ್ದರು. ನಿಪಿ 11 ಮಹಜರು ಮಾಡುವ ಸಮಯದಲ್ಲಿ ಛಾಯಾಚಿತ್ರಗಳನ್ನು ತೆಗೆದಿದ್ದು, ಸದರಿ ಛಾಯಚಿತ್ರಗಳನ್ನು

ಈಗ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ 29 ರಿಂದ 32 ಎಂದು ಗುರುತಿಸಲಾಯಿತು. ಕತ್ತಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಮು ಮಾ 3 ಎಂದು ಗುರುತಿಸಲಾಗಿದೆ. ನೀಲಿ ಬಣ್ಣದ ಜುಬ್ಬಾವನ್ನು ಈಗ ನೋಡುತ್ತಿದ್ದು ಅದನ್ನು ಮು ಮಾ 7 ಎಂದು ಒಂದು ನಶ್ಯ ಬಣ್ಣದ ಟ್ರ್ಯಾಕ್ ಪ್ಯಾಂಟನ್ನು ಈಗ ನೋಡುತ್ತಿದ್ದು ಅದನ್ನು ಮು ಮಾ 8 ಎಂದು ಗುರುತಿಸಲಾಯಿತು. ನಂತರ ನಾವು ಪೊ. ಠಾಣೆಗೆ ಬಂದಿದ್ದು, ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ**

5. ನನಗೆ ಮಾಹಿತಿಯನ್ನು ಪೊಲೀಸರು ಹೇಳಿದ್ದರು. ಎಲ್ಲಾ ಮಹಜರುಗಳನ್ನು ಒಂದೇ ದಿನ ಮಾಡಿದ್ದರು ಎಂದರೆ ಸರಿ. ಪೊಲೀಸರಿಗೆ ನಾನಾಗಿಯೇ ಹೇಳಿಕೆ ನೀಡಿಲ್ಲ. ನಾನು ಪೊಲೀಸರು ಹೇಳಿದ ಕಾರಣ ಮಹಜರುಗಳಿಗೆ ಸಹಿ ಮಾಡಿದ್ದೆ ಎಂದರೆ ಸರಿ. ನಾನು 2013 ನೇ ಇಸವಿಯಲ್ಲಿ ಚಾಲನಾ ಪರವಾನಿಗೆ ಪಡೆದುಕೊಂಡಿದ್ದೇನೆ. ನನಗೆ ಸ್ವಂತ ಲಾರಿ ಇದೆ. ನಾನು ವಿರಾಜಪೇಟೆಯಲ್ಲಿ ಎಂ ಸ್ಯಾಂಡ್ ಸಾಗಿಸಲು ಲಾರಿಯನ್ನು ಬಾಡಿಗೆಗೆ ಓಡಿಸುತ್ತೇನೆ. ನನಗೆ ಪೋಲಿಸರ ಪರಿಚಯ ಇದೆ ಎಂದರೆ ಸರಿ. ನನಗೆ ಈ ಪ್ರಕರಣದಲ್ಲಿ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಪೊಲೀಸರು ನನಗೆ ಎಂ ಸ್ಯಾಂಡ್ ಸಾಗಿಸಲು ತೊಂದರೆ ಮಾಡಬಹುದು ಎನ್ನುವ ಕಾರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುತ್ತಣ್ಣ ಹಾಗೂ ಚಂಗಪ್ಪ ರವರು ಫೋಟೋಗಳಲ್ಲಿ ಕಾಣಿಸುತ್ತಿಲ್ಲ ಎಂದರೆ ಸರಿ. ಈಗ ತೋರಿಸಿದ ಮು ಮಾ 5 ರಲ್ಲಿ ರಕ್ತದ ಕಲೆಗಳು ಕಾಣಿಸುತ್ತಿಲ್ಲ ಎಂದರೆ ಸರಿ. ಪೊಲೀಸರು ಸೃಷ್ಟಿಸಿದ ಸುಳ್ಳು ಮಹಜರುಗಳಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 11 ಮತ್ತು 26 ಮಹಜರುಗಳನ್ನು ಮಾಡುವ ಸಮಯದಲ್ಲಿ ನಿಮ್ಮನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ಮುತ್ತಣ್ಣ ಇದ್ದರು, ಚಂಗಪ್ಪ ಇದ್ದರು. ಆರೋಪಿಗಳು ನಮ್ಮ ಸಮಕ್ಷಮದಲ್ಲಿ ನಾವು ಕೊಲೆಮಾಡಿದ್ದೇವೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಹೇಳಿದ ಕಾರಣ ಆರೋಪಿಗಳು ನಾವು ಕೊಲೆ ಮಾಡಿದ್ದೇವೆ ಎಂದು ನಮ್ಮ ಸಮಕ್ಷಮದಲ್ಲಿ ಹೇಳಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮಹಜರುಗಳ ಬಗ್ಗೆ ಏನೂ

ಗೊತ್ತಿಲ್ಲದೇ ಇದ್ದರೂ ಕೂಡ ಪೊಲೀಸರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)